ಅ) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕು ಸರಹದ್ದಿನ ಗಿರವಿನ ಕೊಪ್ಪದಲ್ಲಿ ಮೆಣಸಿನಕಾಯಿ ಸಹಕಾರ ಸಂಘವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

578(207) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಒಟ್ಟು ಭೂಮಿ ವಿಸ್ತೀರ್ಣ ಎಷ್ಟು;

ಆ) ಇದರಲ್ಲಿ ಕೃಷಿ ಯೋಗ್ಯವಾದ ಭೂಮಿ ಎಷ್ಟು

ಇ) ಪ್ರಸ್ತುತ ಕೃಷಿ ಸಾಗುವಳಿ ಮಾಡುತ್ತಿರುವ ಭೂಮಿ ಎಷ್ಟು;

ಈ) ಇತರೆ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದಿರುವ ಕೃಷಿ ಸಾಗುವಳಿ ಭೂಮಿ ಎಷ್ಟು;

ಉ) ಮಳೆ ಆಧಾರಿತ ಭೂಮಿ ಎಷ್ಟು;

ಊ) ಕೃಷಿ ಜಮೀನನ್ನು ಮುಂದಿನ 3 ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಯೋಜನೆಯಡಿ ಅಳವಡಿಸಲು ಸರ್ಕಾರದ ಮುಂದಿರುವ ಕಾರ್ಯಕ್ರಮವೇನು; ಇದಕ್ಕಾಗಿ ತುಲಬಹುದಾದ ಒಟ್ಟು ವೆಚ್ಚ ಎಷ್ಟು;

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೇಕ್ಟರ್.

ಆ) 2000–01ರ ಕೃಷಿ ಗಣತಿ ಪ್ರಕಾರ ರಾಜ್ಯದಲ್ಲಿ 123.07 ಲಕ್ಷ ಹೇಕ್ಟರ್ ಭೂಮಿ ಕೃಷಿಗೆ ಯೋಗ್ಯವಿದೆ.

ಇ) ಪ್ರತಿ ವರ್ಷದ ಒಟ್ಟು ಸಾಗುವಳಿ ವಿಸ್ತೀರ್ಣ ಮಳೆ, ನೀರಾವರಿ ಸೌಲಭ್ಯ ಮುಂತಾದವುಗಳ ಮೇಲೆ ಅವಲಂಭಿಸಿರುತ್ತದೆ. 2000–01, 2001–02 ಹಾಗೂ 2002–03ರಲ್ಲಿ ಇದು ಕ್ರಮವಾಗಿ 122,84,116.70 ಹಾಗೂ 115.32 ಲಕ್ಷ ಹೆಕ್ಟೇರ್ ರಷ್ಟು ಇರುತ್ತದೆ.

ಈ) ವಿವಿಧ ನೀರಾವರಿ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದು ಕೃಷಿ ಸಾಗುವಳಿ ಭೂಮಿಯ ಒಟ್ಟು ವಿಸ್ತೀರ್ಣ 2000–01, 2001–02 ಹಾಗೂ 2002–03ರಲ್ಲಿ ಇದು ಕ್ರಮವಾಗಿ 32.71,30.89 ಹಾಗೂ 28.4 ಲಕ್ಷ ಹೆಕ್ಟೇರ್ ರಷ್ಟು ಇರುತ್ತದೆ.

ಉ) ಒಟ್ಟು ಸಾಗುವಳಿಯಾದ ವಿಸ್ತೀರ್ಣದಲ್ಲಿ ನೀರಾವರಿ ಪಡೆದಿರುವ ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ ವಿಸ್ತೀರ್ಣ ಮಳೆ ಆಧಾರಿತ ಭೂಮಿಯಾಗಿರುತ್ತದೆ ಇದು 2000–01, 2001–02 ಹಾಗೂ 2002–03ರಲ್ಲಿ ಇದು ಕ್ರಮವಾಗಿ 90.13, 85.81 ಹಾಗೂ 86.91 ಲಕ್ಷ ಹೆಕ್ಟೇರ್‌ರಷ್ಟು ಇರುತ್ತದೆ.

ಊ) ಮುಂದಿನ ಮೂರು ವರ್ಷಗಳಲ್ಲಿ ಸರ್ಕಾರವು ಅಂದಾಜು 786.05 ಕೋಟಿಗಳನ್ನು ಖರ್ಚು ಮಾಡಿ ಸುಮಾರು 978230 ಹೆಕ್ಟೇರ್ ಪ್ರದೇಶವನ್ನು ಉಪಚಿರಸಲು ಯೋಜನೆಯನ್ನು ಸಿದ್ದಪಡಿಸಿದೆ. ಮುಂದುವರಿದ ಯೋಜನೆಗಳನ್ನು ಹೊರತುಪಡಿಸಿ ಬಾಕಿ ಇರುವ ಪ್ರದೇಶವನ್ನು ಅಭಿವೃದ್ಧಿಪಡಿಸಲು ಪ್ರತಿ ಹೆಕ್ಟೇರ್‌ಗೆ ರೂ. 6900 ಗಳಂತೆ ರೂ. 4544.34 ಕೋಟಿಗಳು ಬೇಕಾಗುತ್ತದೆ.

579(723) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಅಡಿಕೆ ಕೃಷಿಯನ್ನು ಅವಲಂಬಿಸಿರುವ ರೈತರು ಇದ್ದಾರೆ;

ಆ) ಅಡಿಕೆ ಬೆಲೆ ಕುಸಿತದ ಸಮಸ್ಯೆಯನ್ನು ಎದುರಿಸಲು ಸರಕಾರ ಕೈಗೊಂಡ ಕ್ರಮಗಳೇನು;

ಇ) ಅಡಿಕೆಗೆ ಬೆಂಬಲ ಬೆಲೆಯನ್ನು ಕೊಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಈ) ಇದ್ದಲ್ಲಿ ಅದರ ವಿವರಗಳೇನು;

ಉ) ಬೆಂಬಲ ಬೆಲೆಯನ್ನು ಕೊಟ್ಟು ಅಡಿಕೆ ಕೃಷಿಕರನ್ನು ಉಳಿಸುವ ಪ್ರಯತ್ನವನ್ನು ಸರಕಾರ ಮಾಡುವರೆ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) 17 ಜಿಲ್ಲೆಗಳಲ್ಲಿ.

ಆ) 1. ಬೆಲೆ ಕುಸಿತದ ಸಂದರ್ಭಗಳಲ್ಲಿ ಸರ್ಕಾರವು ಮಾರುಕಟ್ಟೆ ಮಧ್ಯ ಪ್ರವೇಶ / ಬೆಂಬಲ ಬೆಲೆ ಯೋಜನೆಗಳಡಿಯಲ್ಲಿ ಅಡಿಕೆಯನ್ನು ರೈತರಿಂದ ಖರೀದಿಸಲಾಗಿದೆ.

2. ಅಡಿಕೆ ಬೆಳೆಗಾರ ಆದಾಯ ಹೆಚ್ಚಿಸುವ ದೃಷ್ಟಿಯಿಂದ ಅಂತರ ಬೆಳೆಗಳಾಗಿ ಕಾಳು ಮೆಣಸು, ವೆನಿಲ್ಲಾ, ಕೋಕೋ ಮತ್ತು ಇತರೇ ಬೆಳೆಗಳನ್ನು ಬೆಳೆಸಲು ವಿವಿಧ ಕಾರ್ಯಕ್ರಮಗಳ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ.

3. ಆಮದು ನಿಯಂತ್ರಣಾ ಕ್ರಮಗಳ ಬಗ್ಗೆ ಭಾರತ ಸರ್ಕಾರವನ್ನು ಒತ್ತಾಯಿಸಲಾಗಿದೆ.

4. ಇಲಾಖೆಯ ನರ್ಸರಿಗಳಲ್ಲಿ ಅಡಿಕೆ ಸಸಿ ಉತ್ಪಾದನೆ ಮತ್ತು ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ.

5. ಅಡಿಕೆಯ ಸಮಗ್ರ ಅಭಿವೃದ್ಧಿಗಾಗಿ ಅಡಿಕೆ ಕಾರ್ಯಪಡೆಯನ್ನು ರಚಿಸಲಾಗಿದೆ.

ಇ) ಇಲ್ಲ.